





## ಹಬ್ಬಕ್ಕೆ ಪಾರಂಪರಿಕ ಆಭರಣ

ಹಬ್ಬದ ದಿನಗಳಲ್ಲಿ ಪಾರಂಪರಿಕ ಆಭರಣ ತೊಟ್ಟರೆ ದೈವತ್ವದ ಕಳೆ ಬರುತ್ತದೆ. ನಮ್ಮ ಪರಂಪರೆಯಲ್ಲಿ ಹೊನ್ನನ್ನು ಲಕ್ಷ್ಮಿ ಎಂದು ಪೂಜಿಸುವ ಮನೋಭಾವವೂ ಇದೆ. ಪಾರಂಪರಿಕ ಆಭರಣ ಇದೀಗ ಫ್ಯಾಷನ್‌ನ ಹಾದಿ ಹಿಡಿದಿದೆ. ಸಾಂಪ್ರದಾಯಿಕ ಆಭರಣ, ಟೆಂಪಲ್ ಆಭರಣ ಫ್ಯಾಷನ್‌ಗೂ ಸೈ ಎಂಬುದನ್ನು ಸಾಬೀತುಪಡಿಸಿದೆ. ರೇಷ್ಮೆ ಸೀರೆ ಉಟ್ಟಾಗ ತೊಟ್ಟುಕೊಳ್ಳಲೆಂದೇ ದೇವಾನುದೇವತೆಗಳ ಚಿತ್ರವಿರುವ ಆಭರಣಗಳನ್ನು ಮಹಿಳೆ ಇಷ್ಟಪಡುತ್ತಾಳೆ. ಲಕ್ಷ್ಮಿ ಓಲೆ, ಲಕ್ಷ್ಮಿ ಚಿತ್ರವಿರುವ ನೆಕ್ಲೆಸ್, ಬಳೆಗಳು, ಬ್ರೇಸ್ಲೆಟ್‌ಗಳು, ಇಷ್ಟಗಲ ಕಾಸಿನ ಸರ ಎಲ್ಲದರಲ್ಲೂ ಹೊಸ ವಿನ್ಯಾಸಗಳೇ. ಇವೆಲ್ಲವೂ ಕೈಗೆಟಕುವ ಬೆಲೆಯಲ್ಲಿ ಸಿಕ್ಕಿದರಂತೂ ಮಹಿಳೆಗೆ ಸ್ವರ್ಗಕ್ಕೆ ಮೂರೇ ಗೇಣು.

ಮನಮೋಹಕವಾದ ಪಾರಂಪರಿಕ ಆಭರಣ ಫ್ಯಾಷನ್ ಆಗಿ ಬಂದ ಲಾಗಾಯ್ತಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳುಕು ಹಾಕಿಕೊಂಡು ಮತ್ತಷ್ಟು ಆಕರ್ಷಕವಾಗಿ ಗ್ರಾಹಕರನ್ನು ತಲುಪಿಸಲು ಆಭರಣ ಮಳಿಗೆಗಳು ಮುಂದಾಗಿವೆ. ಇದರ ಜತೆಗೆ ಪ್ರಾಚೀನ ಆಭರಣಗಳು, ವಧುವಿನ ಅಲಂಕಾರ ಸಂಗ್ರಹ, ನಿಜಾಮರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ.. ಹೀಗೆ ಆಭರಣಗಳ ತರಾವರಿ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ರಾಯಭಾರ ನಡೆಸುತ್ತಿದೆ.

ಹಬ್ಬದ ಸಂಭ್ರಮವನ್ನು ಇಮ್ಮಡಿಸಬಲ್ಲವು. ಇಂತಹ ಉಡುಪುಗಳು ಹಬ್ಬಗಳಲ್ಲಿ ಸಾಂಪ್ರದಾಯಿಕವಾಗಿ ಕಂಡರೂ, ಆಧುನಿಕ ಫ್ಯಾಷನ್ ಟ್ರೆಂಡ್‌ನೊಂದಿಗೆ ರಾಜಿಯಾಗದೆ ಎರಡೂ ಮನೋಭಾವದವರನ್ನೂ ಸಮಾನವಾಗಿ ಸೆಳೆಯುತ್ತಿದೆ.

‘ಸ್ಯಾಟಿನ್ ಉಡುಪು ಹಗುರವಾಗಿದ್ದು ಆಕರ್ಷಕ ಬಣ್ಣಗಳಲ್ಲೂ ಲಭ್ಯವಿದೆ. ಕೆಲವು ಕಂಪನಿಗಳು ದೀಪಾವಳಿ ಆಚರಣೆಗಾಗಿಯೇ ‘ಗೊ ಟ್ರೆಡಿಷನಲ್’, ಮಿಕ್ಸ್ ಅಂಡ್ ಮ್ಯಾಚ್, ಎಥ್ನಿಕ್ ಕ್ರಾಪ್ ಟಾಪ್, ಫೆಸ್ಟಿವ್ ಡ್ರೆಸಿಂಗ್ ಮುಂತಾದ ಹೆಸರಿನಲ್ಲಿ ಸೀರೆ, ಸಲ್ವಾರ್, ಟಾಪ್, ಸ್ಕರ್ಟ್‌ಗಳನ್ನು ಹೊರತಂದಿವೆ. ‘ಗೋ ಟ್ರೆಡಿಷನಲ್’ ಮಾದರಿಯಲ್ಲಿ ಕೆಂಪು ಬಾಂದನಿ ಸೀರೆ ಕ್ಲಾಸಿಕ್ ಶೈಲಿಯನ್ನೇ ಹೊಂದಿದೆ. ‘ಮಿಕ್ಸ್ ಅಂಡ್ ಮ್ಯಾಚ್ ಸರಣಿಯಲ್ಲಿ ಎಥ್ನಿಕ್ ಕ್ರಾಪ್ ಟಾಪ್ ಜತೆಗೆ ಗಾಗ್ರಾವನ್ನೂ ಧರಿಸಬಹುದು. ಒಡವೆಗಳ ಮಟ್ಟಿಗೆ ಆ್ಯಂಟಿಕ್ ಫಿನಿಷ್ ಸಿಲ್ವರ್ ನೆಕ್ಲೇಸ್ ಸಖತ್ ಲುಕ್ ಕೊಡುತ್ತದೆ. ‘ಫೆಸ್ಟಿವ್ ಡ್ರೆಸ್ಸಿಂಗ್’ ಸರಣಿಯಲ್ಲಿ ಉದ್ದದ ಕುರ್ತಾ ಜತೆಗೆ ನೆಕ್ಲೇಸ್ ಹಾಗೂ ಕೈತುಂಬ ಬಳೆ ಧರಿಸಿದರೆ ಹೆಚ್ಚಿನ ಶೋಭೆ ತರಬಹುದು’ ಎನ್ನುತ್ತಾರೆ ಫ್ಯಾಷನ್ ಡಿಸೈನರ್ ಫಲ್ಗುಣಿ.

### ಬಗೆ ಬಗೆ ಲೆಹೆಂಗಾ

ಪುಟ್ಟ ಮಕ್ಕಳಿಂದ ಹಿಡಿದು ಎಲ್ಲ ವಯೋಮಾನದವರಿಗೂ ತೊಡಲು ಹಗುರವಾಗಿರುವ ಆಕರ್ಷಕ ಲೆಹೆಂಗಾಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಗಾಢವರ್ಣದ ಲೆಹೆಂಗಾಕ್ಕೆ ತಿಳಿ ಬಣ್ಣದ ದುಪ್ಪಟ್ಟಾಗಳು ಹಬ್ಬಕ್ಕೆ ಕಳೆಕಟ್ಟಿಲದೆ. ಹಬ್ಬದ ಸಮಯದಲ್ಲಿ ನಡೆಯುವ ಗೆಟ್ ಟುಗೆದರ್, ಪಾರ್ಟಿ ಹಾಗೂ ಸಂಭ್ರಮಾಚರಣೆಗೆ ಹೊಸ ವಿನ್ಯಾಸದ ಲೆಹೆಂಗಾ, ಸೀರೆಗಳು ಮಾರುಕಟ್ಟೆಗೆ ಬಂದಿವೆ. ಆಕರ್ಷಕ ಹಾಗೂ ಸೂಕ್ಷ್ಮ ವಿನ್ಯಾಸದ ಎಂಬ್ರಾಯ್ಡರಿ ಲೆಹೆಂಗಾಗಳು ಕೂಡ ದೀಪಾವಳಿ ಸೊಬಗನ್ನು ದುಪ್ಪಟ್ಟು ಮಾಡುತ್ತದೆ.